Code No. 20CC20

# ಜಿಲ್ಲಾ ಮಟ್ಟದ ಪ್ರಥಮ ಪಿ.ಯು.ಸಿ. ವಾರ್ಷಿಕ ಪರೀಕ್ಷೆ, ಫೆಬ್ರವರಿ – 2020

ಅವಧಿ : 3-15 ನಿಮಿಷಗಳು | ವಿಷಯ : ಕನ್ನಡ (01) | ಗರಿಷ್ಠ ಅಂಕಗಳು : 100

## ಅ – ವಿಭಾಗ

**I** ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿರಿ : 10 x 1 = 10

1) ಚೋಳ ದೇಶವನ್ನು ಆಳುತ್ತಿದ್ದ ದೊರೆ ಯಾರು ?
2) ಗಂಗೆ ಸುರಿಯುವ ರಭಸಕ್ಕೆ ಏನೇನು ಒಂದಾದವು ?
3) ಅಣುಬಾಂಬುಗಳಿಗೆ ನೆಲ ಏನಾಗಿದೆ ?
4) ಈ ಭೂಮಿಯನ್ನು ಹೇಗೆ ಕಾಯಬೇಕು ?
5) ಸಿ.ಹೆಚ್. ಲಕ್ಷ್ಮಣಯ್ಯನವರು ತಮ್ಮ ಪತ್ನಿಗೆ ಹೇಳಿಕೊಂಡ ಕೊನೆಯ ಆಸೆ ಯಾವುದು ?
6) ಯಾರ ಪ್ರವಾಸಾನುಭವದಲ್ಲಿ ಲುಂಬಿಣಿಯ ಬಗೆಗೆ ವಿವರಗಳಿವೆ ?
7) ಹಲಸಿನಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣವೆಷ್ಟು ?
8) ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು ?
9) ಬೋಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ ?
10) ಹುಡುಗಿಯರ ಹಾಡಿಗೆ ಬೋಳೇಶಂಕರ ಬಹುಮಾನವಾಗಿ ಏನನ್ನು ಕೊಡುವನು ?

## ಆ – ವಿಭಾಗ

**II** ಅ) ಯಾವುದಾದರೂ 4 ಪ್ರಶ್ನೆಗಳಿಗೆ 2 - 3 ವಾಕ್ಯಗಳಲ್ಲಿ ಉತ್ತರಿಸಿರಿ : 4 x 2 = 8

11) ಸತ್ಯವ ನುಡಿಯುವುದು ಯಾವುದರ ಶೃಂಗಾರವಾಗಬೇಕು ?
12) ಮೃಗಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ ?
13) ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು ?
14) ಮಂಗಳ, ಶುಕ್ರ ಗ್ರಹಗಳನ್ನು ಏಕೆ ಹುಡುಕಬೇಕು ?
15) ನಗುವ ಚಂದಿರ ಏಕೆ ಕೈಗಂಟಕೊಂಡಿದ್ದಾನೆ ?

(ಆ) ಯಾವುದಾದರೂ 3 ಪ್ರಶ್ನೆಗಳಿಗೆ 2 - 3 ವಾಕ್ಯಗಳಲ್ಲಿ ಉತ್ತರಿಸಿರಿ : 3 x 2 = 6

16) ನಿಂಗಮ್ಮಳ ಗಂಡ ಪ್ರಾಣ ಕಳೆದು ಕೊಂಡದ್ದು ಹೇಗೆ ?
17) ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದರು ?
18) ಶಕುಂತಲೆ ತನ್ನ ಬದುಕು ಏನಾಗಿದೆಯೆಂದು ಯೋಚಿಸುತ್ತಾಳೆ ?
19) ನಾಪಿತ ಎರಡನೇ ಬಾರಿ ಮಹಾದೇವನ ಉತ್ಸವಕ್ಕೆ ತೆರಳಿದ್ದೇಕೆ ?

(ಇ) ಯಾವುದಾದರೂ 3 ಪ್ರಶ್ನೆಗಳಿಗೆ 2 - 3 ವಾಕ್ಯಗಳಲ್ಲಿ ಉತ್ತರಿಸಿರಿ : 3 x 2 = 6

20) ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ–ಅತ್ತಿಗೆಯರಿಗೆ ಹೇಗೆ ಕಾಣಿಸುತ್ತಾರೆ ?
21) ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ ?
22) ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ ?
23) ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ ?

## ಇ – ವಿಭಾಗ

**III** (ಅ) ಯಾವುದಾದರೂ 2 ನ್ನು ಕುರಿತು ಸಂದರ್ಭ ಸೂಚಿಸಿ, ವಿವರಣೆ ನೀಡಿ :- 2 x 3 = 6

24) ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
25) ಎಲ್ಲರಿಗೂ ದಕ್ಕುವ ಎಲಚಿಯಾಗು
26) ಚಿಂದಿ ಮನಸ್ಸುಗಳನ್ನು ಜೋಡಿಸಲು ಸೂಜಿ ಇದೆ

(ಆ) ಯಾವುದಾದರೂ 1 ನ್ನು ಕುರಿತು ಸಂದರ್ಭ ಸೂಚಿಸಿ, ವಿವರಣೆ ನೀಡಿ :- 1 x 3 = 3

27) ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ
28) ರಂಗರಾವ್ ಅವರಿಂದ ಸಾರ್ವಜನಿಕ ಸೇವಾ ನಿಷ್ಠೆಯನ್ನು ಮನಗಾಣಿಸಿಕೊಂಡೆ

(ಇ) ಯಾವುದಾದರೂ 1 ನ್ನು ಕುರಿತು ಸಂದರ್ಭ ಸೂಚಿಸಿ, ವಿವರರಣೆ ನೀಡಿ :- 1 x 3 = 3

29) ದಾರಿ ತಪ್ಪಿಸಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ.
30) ಕೆಲಸ ಮಾಡಿದವರು ಊಟ ಮಾಡಿದ ನಂತರ ಸೋಮಾರಿಗಳ ಊಟ.

p.t.o (ಪು.ತಿ.ನೋ)

https://www.karnatakaboard.com

## ಈ – ವಿಭಾಗ

IV (ಅ) ಯಾವುದಾದರೂ 3 ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ : 3 x 4 = 12

31) ದ್ರೋಣನ ಕಳೇಬರವನ್ನು ಕಂಡು ದುರ್ಯೋಧನ ಹೇಗೆ ದುಃಖಿಸುತ್ತಾನೆ ? -

32) ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.

33) ಹೆಣ್ಣು ಭ್ರೂಣ ಹತ್ಯೆಯನ್ನು ಈ ಕವಿತೆಯಲ್ಲಿ ಹೇಗೆ ವಿರೋಧಿಸಲಾಗಿದೆ ?

34) ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂಧನವನ್ನು ಹೇಗೆ ನಾಶಗೈದಿದೆ ? ವಿವರಿಸಿ.

(ಆ) ಯಾವುದಾದರೂ 2 ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ : 2 x 4 = 8

35) ಹಳ್ಳಿಯ ಜನ ಕೈಯಲ್ಲಿ ರಾಗಿ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿರಿ.

36) ಮಾಯಾದೇವಿಯ ದೇವಾಲಯದ ಪರಿಸರ ಹೇಗಿತ್ತು ?

37) ಸಿಪಾಯಿದಂಗೆಯನ್ನು ರೈತರ ದಂಗೆಯೆಂದು ಲೇಖಕರು ಏಕೆ ಕರೆದಿದ್ದಾರೆ ?

(ಇ) ಯಾವುದಾದರೂ 2 ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ : 2 x 4 = 8

38) ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿರಿ.

39) ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು ?

40) ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ ?

## ಉ – ವಿಭಾಗ

V (ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : 1 x 5 = 5

41) ಅರಿಯಮೆ ಬಿಲ್ಲಬಿನ್ನಣಕೆ ಗಾಂಡೀವಿಯಲ್ತು ಪಿನಾಕಪಾಣಿಯುಂ
ನೆರೆಯನಿದಿರ್ಚೆ ನಿಮ್ಮೊಡನೆ ಕಾದಿ ಗೆಲಲ್ಕದು ನಿಮ್ಮುಪೇಕ್ಷೆಯಿಂ
ದರಿಯೆನಿದೆನ್ನ ಕರ್ಮವಶಮೆಂದರಿಯೆಂ ನಿಮಗಿಂತು ಸಾವುಮೀ
ತೆರದಿನ ಕಾರಣಂ ನೆರೆಯ ಸಂಭವಿಸಿರ್ದುದೊ ಕುಂಭ ಸಂಭವಾ

42) ಸೂಜಿ ಮೂಗಿಗೆ ದಾರ ಪೋಣಿಸುವ ಅಮ್ಮಿ
ಸಂತೆಯಲ್ಲಿ ಕೊಂಡು ತಂದ ನಿರಾಕಾರ ಮಾನಕ್ಕೆ ಮೊಲಿಗೆ ಹಾಕಿ
ರೂಪು ನೀಡುತ್ತಾಳೆ ಆಕಾಶದಂತಹ ಕಡಲಿನಂತಹ ಬಟ್ಟೆಗೆ
ನಮೂನಮೂನೆಯ ಪಾತ್ರ ಕೊಡುವ ಅಮ್ಮಿಯೇ ಸೃಷ್ಟಿಕರ್ತೆ
ಅಮ್ಮಿಯ ಕಣ್ಣು ಮೂಗು ಹಣೆ ರೋಮಗಳಿಂದ ಇಳಿಯುವ
ಉಪ್ಪು ನೀರಿನಿಂದಲೇ ಈ ನಿಗೂಢ ಬದುಕಿನೊಳಗೆ ನಿರ್ಜೀವ ಬಟ್ಟೆಗೆ ಪ್ರವೇಶ

(ಆ) ಈ ಕೆಳಗಿನವುಗಳಲ್ಲಿ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ :- 6 x 2 = 12

43) ಪದಗಳ ಅರ್ಥ ಬರೆಯಿರಿ. : ಇಭಶೈಲ, ಸ್ವೋಪಜ್ಞತೆ

44) ಬಿಡಿಸಿ ಬರೆಯಿರಿ. : ಪನ್ನಗಾಭರಣ, ವಿನಯೋಲ್ಲಂಘನ

45) ವಿರುದ್ಧ ಪದ ಬರೆಯಿರಿ. : ಸ್ವದೇಶಿ, ಉನ್ನತಿ

46) ನಾನಾರ್ಥಗಳನ್ನು ಬರೆಯಿರಿ. : ಕಾಡು, ಆಳು

47) ಸಮಾನಾರ್ಥಕಗಳನ್ನು ಬರೆಯಿರಿ. : ಕಣ್ಣು, ಅಂಘ್ರಿ

48) ತದ್ಭವ ಬರೆಯಿರಿ. : ವರ್ಣ, ನಿತ್ಯ

49) ವಾಕ್ಯಗಳಲ್ಲಿ ಬಳಸಿ ಬರೆಯಿರಿ. : ಮೊರೆ ಹೋಗು, ಮುಗಿಲು ಹರಿದು ಬೀಳು -

(ಇ) ಒಂದನ್ನು ಕುರಿತು ಪ್ರಬಂಧ ಬರೆಯಿರಿ :- 1 x 5 = 5

50) ಕನ್ನಡ ನಾಡಿನ ಹಿರಿಮೆ 51) ಓದುವ ಹವ್ಯಾಸ

(ಈ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ :- 1 x 4 = 4

52) ನಿಮ್ಮ ಪ್ರದೇಶದ ನೆರೆ ಹಾವಳಿಯನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಪರಿಹಾರ ಕಾರ್ಯ ಕೈಗೊಳ್ಳುವಂತೆ ವಿನಂತಿ ಮಾಡಿಕೊಳ್ಳಿರಿ.

ಅಥವಾ

53) ನಿಮ್ಮ ಕಾಲೇಜಿನ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

(ಉ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ : 1 x 4 = 4

54) ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ 55) ಆಳಾಗಬಲ್ಲವನು ಅರಸಾಗಬಲ್ಲ.

*******

https://www.karnatakaboard.com